**<u>ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ,</u>**

**<u>ಹಗರಿಬೊಮ್ಮನಹಳ್ಳಿ</u>**

ಸಿ ಸಿ ನಂ. 194/2021

<u>ಸಾಕ್ಷಿಗೆ ದಿನಾಂಕ 24-08-2024 ರಂದು ಪ್ರಮಾಣ ವಚನ ಭೋದಿಸಲಾಯಿತು.</u>

C.W.: 1 P.W.: 1

| | | |
|---|---|---|
| ಹೆಸರು | ಃ | ವಿಶ್ವನಾಥ |
| ತಂದೆಯ ಹೆಸರು | ಃ | ಬಸವರಾಜ |
| ವಯಸ್ಸು | ಃ | 50 ವರ್ಷ |
| ಉದ್ಯೋಗ | ಃ | ಔಷಧಿ ವ್ಯಾಪಾರ |
| ವಾಸ ಸ್ಥಳ | ಃ | ಹನಸಿ ಗ್ರಾಮ |

<u>ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-</u>

ಆರೋಪಿತನು ನಮ್ಮ ಗ್ರಾಮದವನು, ಅವನು ನನಗೆ ಪರಿಚಯ. ಆರೋಪಿತನು ನನ್ನ ಅಂಗಡಿಯ ಹತ್ತಿರ ಬಂದಾಗ ಸಣ್ಣ ಪುಟ್ಟ ಮಾತಿನ ಜಗಳವುಂಟಾಗಿ ಆ ಕಾರಣಕ್ಕೆ ನಾನು ಸುಮಾರು 4 ವರ್ಷದ ಹಿಂದೆ ಪೊಲೀಸ್ ಠಾಣೆಗೆ ಹೋಗಿದ್ದಾಗ ಪೋಲೀಸರು ನನ್ನಿಂದ ಕೆಲವು ದಾಖಲೆಗಳಿಗೆ ಸಹಿಯನ್ನು ಪಡೆದುಕೊಂಡಿರುತ್ತಾರೆ. ನಾನು ಆರೋಪಿತನ ವಿರುದ್ಧ ಯಾವುದೇ ದೂರನ್ನು ನೀಡಿರುವುದಿಲ್ಲ.

ಸಾಕ್ಷಿಗೆ ಒಂದು ದಾಖಲೆ ತೋರಿಸಲಾಗಿ ಅದು ದೂರಾಗಿದ್ದು ಅದರಲಿಲ ತನ್ನ ಸಹಿ ಇದೆ ಅಂತಾ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1ಎ ಅಂತಾ ಗುರುತಿಸಲಾಯಿತು. ಸದರಿ ದೂರಿನಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಪೋಲೀಸರ ಕೋರಿಕೆ ಮೇರೆಗೆ ನಾನು ಸದರಿ ದಾಖಲೆಗೆ ಸಹಿ ಮಾಡಿರುತ್ತೇನೆ. ಸಾಕ್ಷಿಗೆ ಇನ್ನೊಂದು ದಾಖಲೆ ತೋರಿಸಲಾಗಿ ಅದು ಘಟನಾ ಸ್ಥಳದ ಪಂಚನಾಮೆಯಾಗಿದ್ದು ಅದರಲ್ಲಿ ಸಾಕ್ಷಿ ತನ್ನ ಸಹಿ ಇದೆ ಅಂತಾ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2ಎ ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ ಏನು ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ. ಪೋಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿಲ್ಲ ಮತ್ತು ನಾನು ಪೋಲೀಸರಿಗೆ ಯಾವುದೇ ಸ್ಥಳವನ್ನು ತೋರಿಸಿಲ್ಲ. ಸದರಿ ದಾಖಲೆಗೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಅದು ಕಚ್ಚಾ ನಕಾಶೆಯಾಗಿದ್ದು ಸಾಕ್ಷಿಯು ಅದರಲ್ಲಿ ತನ್ನ ಸಹಿ ಇದೆ ಅಂತಾ ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಎಂದು ಮತ್ತು

ಸಾಕ್ಷಿಯ ಸಹಿಯನ್ನು ನಿಪಿ-3 ಎ ಅಂತಾ ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ ಏನು ಬರೆದಿರುತ್ತಾರೆನ್ನುವುದು ನನಗೆ ಗೊತ್ತಿಲ್ಲ. ಪೋಲೀಸರ ಕೋರಿಕೆ ಮೇರೆಗೆ ನಾನು ಸದರಿ ದಾಖಲೆಗೆ ಸಹಿ ಮಾಡಿರುತ್ತೇನೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಸದರಿ ಮಂಜುನಾಥ ಸ್ವಾಮಿಯನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ವಿ ಸಿ ಮೂಲಕ ಹಾಜರಿರುವ ವ್ಯಕ್ತಿ ಸದರಿ ಮಂಜುನಾಥ ಸ್ವಾಮಿಯಾಗಿದ್ದು ಅವನ ವಿರುದ್ದ ಏನು ಪ್ರಕರಣ ಇದೆ ಎನ್ನುವುದು ನನಗೆ ಗೊತ್ತಿಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

(ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲು ಕೇಳಿಕೊಂಡಿದ್ದು ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸ. ಸ. ಅಭಿಯೋಜಕರವರಿಂದಃ-</u>

ದಿಃ 10-05-2021 ರಂದು ಆರೋಪಿತನು ತಾನು ಮಾನವ ಹಕ್ಕುಗಳ ರಕ್ಷಣೆಯ ಅಧ್ಯಕ್ಷನಾಗಿರುತ್ತೇನಂತಾ ಹೇಳುತ್ತಾ ನನ್ನ ಔಷಧಿಯ ಅಂಗಡಿಗೆ ಬಂದು ನೀನು ನಕಲಿ ಔಷಧಿಗಳನ್ನು ಮಾರಾಟ ಮಾಡುತ್ತೀಯಾ ಸ್ತ್ರೀಯರಿಗೆ ಅಬಾಶನ್ ಮಾಡಿ ಭ್ರೂಣ ಹತ್ಯೆಯನ್ನು ಮಾಡುತ್ತೀ ನಿನ್ನ ವಿರುದ್ಧ ಅಧಿಕಾರಿಗಳಿಗೆ ಸುಳ್ಳು ಅರ್ಜಿಗಳನ್ನು ಕೊಡುತ್ತೇನಂತಾ ಬೆದರಿಸಿ ನನ್ನಿಂದ ರೂ.20 ಸಾವಿರ ಹಣವನ್ನು ಪಡೆದುಕೊಂಡು ಪುನಃ ತನಗೆ ಪ್ರತಿ ತಿಂಗಳು ರೂ.10 ಸಾವಿರ ಹಣವನ್ನು ಕೊಡುವಂತೆ ನನಗೆ ಬೆದರಿಸಿ ಕೊಡದಿದ್ದರೆ ಸೂಳೆಮನಗನೇ ನಿನ್ನ ವಿರುದ್ದ ಪುನಃ ಸುಳ್ಳು ಆರೋಪ ಮಾಡಿ ಅಧಿಕಾರಿಗಳಿಗೆ ಅರ್ಜಿ ಕೊಟ್ಟು ಔಷಧಿ ಅಂಗಡಿ ಮುಚ್ಚಿಸುತ್ತೇನಂತಾ ಬೆದರಿಕೆ ಹಾಕಿರುತ್ತಾನೆಂದರೆ ಸರಿಯಲ್ಲ.

ದಿಃ 05-05-2021 ರಂದು ಆರೋಪಿತನು ನನ್ನ ಅಂಗಡಿಗೆ ಪುನಃ ಬಂದು ರೂ.10 ಸಾವಿರಗಳನ್ನು ಕೊಡುವಂತೆ ಕೇಳಿದ್ದು ಅದಕ್ಕೆ ನಾನು ಪದೇ ಪದೇ ಹಣ ಕೊಡಲು ಆಗುವುದಿಲ್ಲಾಂತ ಹೇಳಿದ್ದಕ್ಕೆ ಆರೋಪಿತನು ನನಗೆ ಅವಾಚ್ಯ ಶಬ್ದಗಳಿಂದ ಬೈದು ಮೆಡಿಕಲ್ ಶಾಪಿನಲ್ಲಿ ಚೆನ್ನಾಗಿ ವ್ಯಾಪಾರ ಮಾಡಿ ಹಣ ಮಾಡುತ್ತೀಯಾ ನನಗೆ ರೂ.10 ಸಾವಿರ ಕೊಡು ಅಂತಾ ಕೇಳಿದರೆ ಆಗುವುದಿಲ್ಲಾಂತ ಹೇಳುತ್ತೀಯಾ ನಿನ್ನನ್ನು ನೋಡಿಕೊಳ್ಳುತ್ತೇನಂತಾ ಅವಾಚ್ಯ ಶಬ್ದಗಳಿಂದ ಬೈದು ಜೀವಬೆದರಿಕೆ ಹಾಕಿದರೆಂದರೆ ಸರಿಯಲ್ಲ. ಆಗ ಚಾಸಾ-3 ಮತ್ತು 4 ರವರು ಆರೋಪಿಗೆ ಬುದ್ಧಿವಾದ ಹೇಳಿ ಕಳಿಸಿದರೆಂದರೆ ಸರಿಯಲ್ಲ. ಘಟನೆಯ ಕುರಿತು ನಾನು ನಿಪಿ-1 ರಂತೆ ಪೋಲೀಸರಿಗೆ ದೂರು ನೀಡಿರುತ್ತೇನೆಂದರೆ ಸರಿಯಲ್ಲ. ನಂತರ ಪೋಲೀಸರು ಘಟನಾ ಸ್ಥಳದಲ್ಲಿ ನಿಪಿ-2 ರಂತೆ ಪಂಚನಾಮೆಯನ್ನು ಜರುಗಿಸಿ, ನಿಪಿ-3 ರಂತೆ ಘಟನಾ ಸ್ಥಳದಲ್ಲಿ

ನಕಾಶೆಯನ್ನು ತಯಾರಿಸಿರುತ್ತಾರೆಂದರೆ ಸರಿಯಲ್ಲ. ನಂತರ ನಾನು ಘಟನೆಯ ಕುರಿತು ದಿನಾಂಕಃ 03-07-2021 ರಂದು ಮರುಹೇಳಿಕೆಯನ್ನು ನೀಡಿರುತ್ತೇನೆಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-4 ಅಂತಾ ಗುರುತಿಸಲಾಯಿತು. ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತನೊಂದಿಗೆ ರಾಜೀ ಮಾಡಿಕೊಂಡು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು. ಆರೋಪಿ ಪರ ವಕೀಲರಿಂದಃ- ಇಲ್ಲ

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ